# ಜೀವನ ಯಾನ

■ ಸುಶೀಲಾ ಆರ್. ರಾವ್

ಚಿದಾನಂದ ತುಂಬು ಅಂತಃಕರಣದ ತರುಣ. ಎಷ್ಟೆಂದರೆ ನಾಲ್ಕಾರು ಶುಷ್ಕ ಹೃದಯಗಳಿಗೆ ಅದನ್ನು ಹಂಚಬಹುದಾದಷ್ಟು ಸಾಧ್ಯವಿದ್ದರೆ! ಖ್ಯಾತ ಟ್ರಾವೆಲ್ಸ್ ಒಂದರಲ್ಲಿ ಉದ್ಯೋಗಿಯಾಗಿದ್ದ ಆತ, ಟೂರ್ ಮ್ಯಾನೇಜರ್ ಕಮ್ ಗೈಡ್ ಆಗಿ ಕಾರ್ಯನಿರ್ವಹಿಸುತ್ತಿದ್ದ. ಯಾವುದೇ ಪ್ರವಾಸವು ಸುವಿಹಾರವಾಗುವಂತೆ ಗಮನಹರಿಸುತ್ತಿದ್ದ ಹಿರಿಯ ಪ್ರಯಾಣಿಕರತ್ತ ಗೌರವ, ತರುಣರಲ್ಲಿ ಸಪ್ರಮಾಣ ಸ್ನೇಹ ಮತ್ತು ಮಕ್ಕಳತ್ತ ವಾತ್ಸಲ್ಯಧಾರೆ ಹರಿದು ಬಿಡುವ ವಿವೇಕಿ. ಚಿದಾನಂದನಲ್ಲಿ ಮಾತು–ಕೃತಿಗಳ ಸಾಮರಸ್ಯವೂ ಇತ್ತು. ಮೌನಿ, ವಾಗ್ಮಿ, ಮಿತಭಾಷಿ – ಹೀಗೆ ಮೂರು ವಿಭಿನ್ನ ಪಾತ್ರ ಪೋಷಣೆಯ ನಟನೂ ಆಗುತ್ತಿದ್ದ ಸಂದರ್ಭಾನುಸಾರ.

ಚಿದಾನಂದ ಅವಿವಾಹಿತ, ಹೆತ್ತವರಿರಲಿಲ್ಲ, ಅಣ್ಣ, ಅತ್ತಿಗೆಯವರೊಂದಿಗೆ ವಾಸವಾಗಿದ್ದ. ಪದವೀಧರ ನಿರುದ್ಯೋಗಿಯಾಗಿದ್ದಾಗ, ಬಾಲ್ಯದಲ್ಲಿ ಪ್ರಿಯ ಹವ್ಯಾಸವಾಗಿದ್ದ ಚಿತ್ರಕಲೆಯನ್ನು ನೆನಪಿಸಿಕೊಂಡು, 'ಚಿತ್ತಾರ' ಕಲಾಶಾಲೆಯ ವ್ಯಾಸಂಗಿಯಾಗಿದ್ದ. ಟ್ರಾವೆಲ್ಸ್‌ನಲ್ಲಿ ಕೆಲಸ ದೊರೆತಾಗ ಸಮಯ ಜತೆಗೂಡಲಿಲ್ಲವಾಗಿ ಕಲಾಸಕ್ತಿ ತಾನಾಗಿ ಹಿಂದೆ ಸರಿದಿತ್ತು. ಉತ್ಸಾಹ ಸಡಿಲವಾಗುತ್ತ ಕುಂಚ ಮೂಲೆಗೆ ಜಾರಿತ್ತು. ಬಣ್ಣ, ಹಾಳೆಗಳ ರಾಶಿ ಸದಾ ಧೂಳು ಹೊದ್ದುಕೊಂಡು ಇದ್ದಲ್ಲೇ ಬೆಚ್ಚಗಿದ್ದವು. ಪ್ರಶ್ನಿಸಿದವರಿಗೆ ಅವನು 'ನಿರುತ್ತರ ಕುಮಾರ'! ಕೆಲವೊಮ್ಮೆ 'ಟೈಮಿಲ್ಲ' ಎಂಬ ನಿರಾಸಕ್ತಿಯ ಪುನರುಕ್ತಿ.

ಈ ಬಾರಿಯ ದಕ್ಷಿಣ ಭಾರತದ ಟೂರಿಗೆ ಮೈತ್ರಿ ಎಂಬ ಗೃಹಿಣಿ ಮಗಳೊಂದಿಗೆ ಹೊರಟಿದ್ದಳು. ಹಿಂದೆ ಅವಳು ಚಿದಾನಂದನಿದ್ದ ಟ್ರಾವೆಲ್ಸ್‌ನಲ್ಲಿ ಸ್ವಲ್ಪಕಾಲ ಉದ್ಯೋಗಿಯಾಗಿದ್ದು ಬ್ಯಾಂಕ್ ನೌಕರಿ ಲಭಿಸಿದ ಕಾರಣ ಅದನ್ನು ತೊರೆದಿದ್ದಳು. ಪತಿ ಭಾನುಪ್ರಕಾಶ್ ಇಂಜಿನಿಯರ್. ಉದ್ಯೋಗ ನಿಮಿತ್ತ ತಾತ್ಕಾಲಿಕವಾಗಿ ವಿದೇಶಕ್ಕೆ ಹಾರಿದ್ದ. ಇತ್ತ ಅವಳಿಗೂ ಎಂಟರ ಮಗಳು ಮಧುಶ್ರೀಗೂ ಬೇಸಿಗೆಯ ಬೇಗೆಗೆ ತನುಮನ ಭಣಗುಡುತ್ತಿತ್ತು. ಅದೇ ವೇಳೆಗೆ ಮಧುಶ್ರೀ ಫ್ರೆಂಡ್ ಧನ್ಯತಾಳ ಹೆತ್ತವರು ದಕ್ಷಿಣ ಭಾರತ ವಿಹಾರ ಯೋಜನೆ ಹಾಕತೊಡಗಿದ್ದರು, ಅದೇ ಟ್ರಾವೆಲ್ಸ್‌ನಲ್ಲಿ.

ಸ್ನೇಹದ ಕಡಲಿಗೆ ಎಲ್ಲೆಯಾದರೂ ಎಲ್ಲಿದೆ? ಧನ್ಯತಾಳಿಗೆ ಮಧುಶ್ರೀಯ ನೆನಪು ಒಸರಿದ್ದೇ ತಡ, ಅತ್ತಲಿನ ದೂರವಾಣಿ ಇತ್ತ ಕಡೆಗೇ ಉಲಿದುದು ಹಗುರವಾಗತೊಡಗಿತು. ತಮ್ಮ ಟೂರಿನ ಡಿಟೈಲ್ಸ್ ಕೊಡುತ್ತ ಜತೆಗೂಡುವಂತೆ ಕರೆ ಮೇಲೆ ಕರೆಗಳು... ಒಂದಿಷ್ಟೂ ಕರೆ ಕರೆಯಾಗಲಿಲ್ಲ ಮಧುವಿಗೆ... ಮನಸ್ಸಿನಲ್ಲಿ ತಂಪಾಗಿ ಹೆಪ್ಪುಗಟ್ಟಿದ್ದವು. ಅಮ್ಮನಿಗೆ ದುಂಬಾಲು ಬಿದ್ದದ್ದಾಯಿತು. ಸನಿಹದ ಬಂಧುಗಳೆಲ್ಲ ನಕಾರಣ ಹೇಳಲು ಅವರವರದೇ ಕಾರಣಗಳಿದ್ದವು. ಕಾತರಿಸಿ ಕಾತರಿಸಿ ಚಾತಕವಾದ ಕರುಳಬಳ್ಳಿಗೆ ಅಸ್ತುಮುದ್ರೆ ಒತ್ತುತ್ತ 'ಓಕೆ' ಅಂದ ತಾಯಿ ಹರ್ಷ ವರ್ಷವಾದಳು. ಹೀಗಾಗಿ ತಾಯಿ ಮಗಳಿಬ್ಬರೂ ಜತೆಗೂಡಿ ಪ್ರವಾಸಕ್ಕೆ ಸಿದ್ಧತೆ ನಡೆಸಿದರು. ಪರಸ್ಪರ ಖುಷಿ

